ದಿನಾಂಕ **05.04.2021** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀಸವಾಲು ಃ ಶ್ರೀ ಹೆಚ್.ಡಬ್ಲ್ಯೂ.ಎ. ವಕೀಲರಿಂದಃ**

ಸರ್ವೆ ನಂ. 360/09 ಜಮೀನು ಯಾರ ಹೆಸರಿನಲ್ಲಿ ಇತ್ತು ಎಂದರೆ ತುಳಸಿರಾಮಣ್ಣ ನವರ ಹೆಸರಿನಲ್ಲಿತ್ತು, ಸದರಿ ಜಮೀನು ಹೇಗೆ ಬಂದಿತ್ತು ಎಂದರೆ ತುಳಸಿರಾಮಣ್ಣನವರಿಗೆ ಅವರ ತಂದೆಯವರ ಕಡೆಯಿಂದ ಬಂದಿತ್ತು, ತುಳಸಿರಾಮಣ್ಣ ಮತ್ತು ಅವರ ಸಹೋದರರ ನಡುವೆ ಯಾವಾ ವಿಭಾಗವಾಗಿದೆ ಎಂದರೆ ಸುಮಾರು 29-30 ವರ್ಷಗಳ ಹಿಂದೆ ಆಗಿದೆ. ಆ ಸಮಯದಲ್ಲಿ ನೀವು ಹಾಜರಿದ್ದೀರಾ ಎಂದರೆ ಹೌದು, ಕಾರಣ ನಾನು ತುಳಸಿರಾಮಣ್ಣನವರ ಸಹೋದರ. ಸರ್ವೆ ನಂ. 360/09 ಜಮೀನನ್ನು ನಾವು ರಾಮಕೃಷ್ಣಪ್ಪನವರಿಗೆ ಮಾರಾಟ ಮಾಡಿದ್ದೆವು ಎಂದರೆ ಸರಿಯಲ್ಲ, ಕ್ರಯದ ಪ್ರಕಾರ ರಾಮಕೃಷ್ಣಪ್ಪನವರ ಹೆಸರಿಗೆ ಖಾತೆ ವರ್ಗಾವಣೆಯಾಗಿತ್ತು ಎಂದರೆ ಸರಿಯಲ್ಲ, ರಾಮಕೃಷ್ಣಪ್ಪನವರ ಮರಣಾನಂತರ ಅವರ ಮಕ್ಕಳು ಸದರಿ ಜಮೀನಿನ ಸ್ವಾಧೀನದಲ್ಲಿದ್ದರೂ ಎಂದರೆ ಸರಿಯಲ್ಲ, ತುಳಸಿರಾಮಣ್ಣ ಮತ್ತು ಆತನ ಮಕ್ಕಳು ಮೇಲೆ ಹೇಳಿದ ಜಮೀನಿನಲ್ಲಿ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ, ಮೇಲೆ ಹೇಳಿದ ಸ್ವತ್ತು ವಿಭಾಗದಲ್ಲಿ ತುಳಸೀರಾಮಣ್ಣನವರ ಭಾಗಕ್ಕೆ ಹೋಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, 26ನೇ ಪ್ರತಿವಾದಿ ನನಗೆ ಸಹೋದರರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಂಗತಿಗಳ ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್‌ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ,

ಸಹಿ/-

ಹಿರಿಯ ಸಿ.ಜೆ. ಮತ್ತು ಜೆಎಂಎಫ್.ಸಿ ಸಿರಾ.